## 30. ವೆಂಟಿಲೇಟರ್ ಖರೀದಿ ಕುರಿತ ಕೈ ನಾಯಕರ ಆರೋಪ ಅಲ್ಲಗಳೆದ ಸರ್ಕಾರ

ಸೋಂಕಿನ ನಿರ್ವಹಣೆ, ಚಿಕಿತ್ಸೆಗೆ ಸಾಮಗ್ರಿ ಹಾಗೂ ವೆಂಟಿಲೇಟರ್‌ಗಳ ಖರೀದಿಯಲ್ಲಿ ದೊಡ್ಡ ಹಗರಣ ನಡೆದಿದೆ ಎಂಬ ಪ್ರತಿಪಕ್ಷ ಕಾಂಗ್ರೆಸ್ ನಾಯಕರ ಆಪಾದನೆಯನ್ನು ರಾಜ್ಯ ಸರ್ಕಾರ ಸ್ಪಷ್ಟವಾಗಿ ತಳ್ಳಿಹಾಕಿದೆ.

ಸೋಂಕು ಆರಂಭವಾದ ಮಾರ್ಚ್‌ನಿಂದ ಸಲಕರಣೆಗಳ ಕೊರತೆ ಇದ್ದ ಕಾರಣ ಬೆಲೆ ದುಬಾರಿಯಾಗಿತ್ತು. ಈಗ ಬೆಲೆ ಕಡಿಮೆಯಾಗಿದೆ. ಪ್ರತಿಪಕ್ಷ ನಾಯಕರು ಈ ತಪ್ಪು ಲೆಕ್ಕಚಾರ ಹಾಕಿ ಹಗರಣ ನಡೆದಿದೆ ಎಂದು ಬಿಂಬಿಸುತ್ತಿರುವುದು ಸರಿಯಲ್ಲ ಎಂದು ಸರ್ಕಾರ ಸಮಜಾಯಿಸಿ ನೀಡಿದೆ.

ಡಿಸಿಎಂ ಡಾ:ಅಶ್ವತ್ಥನಾರಾಯಣ, ಆರೋಗ್ಯ ಸಚಿವ ಶ್ರೀರಾಮುಲು ಅವರು ವಿಕಾಸಸೌಧದಲ್ಲಿ ಜಂಟಿ ಪತ್ರಿಕಾಗೋಷ್ಠಿ ನಡೆಸಿದರು. 'ಪ್ರತಿಪಕ್ಷ ನಾಯಕರ ಆರೋಪದಲ್ಲಿ ಹುರುಳಿಲ್ಲ, ತನಿಖೆ ನಡೆಸುವ ಪ್ರಶ್ನೆಯೇ ಇಲ್ಲ. ಪ್ರತಿಯೊಂದಕ್ಕೂ ಸರ್ಕಾರ ಸದನದಲ್ಲಿ ಉತ್ತರ ಕೊಡಲು ಸಿದ್ಧವಿದೆ. ಎಲ್ಲದಕ್ಕೂ ಲೆಕ್ಕ ಇದೆ' ಎಂದು ಸಮರ್ಥನೆ ಮಾಡಿಕೊಂಡರು.

"ಆರಂಭದಲ್ಲಿ ವೆಂಟಿಲೇಟರ್‌ಗಳಿಗೆ ಕೊರತೆ ಇತ್ತು. ಒಂದು ಕಂಪನಿ ಮಾತ್ರ ತಯಾರಿಸುತ್ತಿತ್ತು. ಮೊದಲಿಗೆ ಒಟ್ಟು 130 ವೆಂಟಿಲೇಟರ್‌ಗಳ ಖರೀದಿಗೆ ಆರ್ಡರ್ ಮಾಡಲಾಗಿತ್ತು. ಈ ಪೈಕಿ 80 ಪೂರೈಕೆಯಾಗಿದೆ. ತಮಿಳುನಾಡಿನಲ್ಲಿ 4 ಲಕ್ಷಕ್ಕೆ ಖರೀದಿಯಾದ ವೆಂಟಿಲೇಟರ್‌ಗೆ ಇಲ್ಲಿ 18 ಲಕ್ಷ ಪಾವತಿಸಲಾಗಿದೆ ಎಂಬ ಆರೋಪ ಸರಿಯಲ್ಲ. ತಮಿಳುನಾಡಿನಲ್ಲಿ ಖರೀದಿ ಆಗಿರುವುದು ಮೊಬೈಲ್ ವೆಂಟಿಲೇಟರ್ ಒಂದು ಕಡೆಯಿಂದ ಇನ್ನೊಂದು ಕಡೆ ತೆಗೆದುಕೊಂಡು ಹೋಗಲು ಆ್ಯಂಬುಲೆನ್ಸ್‌ನಲ್ಲಿ ಬಳಕೆಯಾಗುವ ವೆಂಟಿಲೇಟರ್ ಅದು. ಇದನ್ನು ಅರಿಯದೆ ಪ್ರತಿಪಕ್ಷ ನಾಯಕರು ಆರೋಪಿಸುತ್ತಿದ್ದಾರೆ" ಎಂದು ಡಿಸಿಎಂ ಅಶ್ವತ್ಥನಾರಾಯಣ ಹೇಳಿದರು.

ಹಿಟ್ ಆ್ಯಂಡ್ ರನ್ ಬೇಡ: "ಹಿಂದಿನ ಸರ್ಕಾರದಲ್ಲಿ ಶಿವಾನಂದ ಪಾಟೀಲ್ ಆರೋಗ್ಯ ಸಚಿವರಾಗಿದ್ದಾಗ ವೆಂಟಿಲೇಟರ್‌ಗಳನ್ನು ತಲಾ 15.12 ಲಕ್ಷ ರೂ.ಗೆ ಖರೀದಿಸಲಾಗಿದೆ. ಆಗ ಅಂತಹ ಪರಿಸ್ಥಿತಿ ಏನಿತ್ತು. ತಪ್ಪು ಸಂದೇಶ ಹೋಗಬಾರದು ಎಂದು ವಿವರ ಕೊಡುತ್ತಿದ್ದೇವೆ. ಹಿಟ್ ಆ್ಯಂಡ್ ರನ್ ಬೇಡ. ನಾವು ಇಲ್ಲೇ ಕೂತಿದ್ದೇವೆ". ಎಂದು ಕಾಂಗ್ರೆಸ್ ನಾಯಕರಿಗೆ ತಿರುಗೇಟು ನೀಡಿದರು.

ಡಿಸಿಎಂ ಸೂಚನೆಯಂತೆ ಆರೋಗ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, "ಮಾರ್ಚ್‌ನಲ್ಲಿ ಖರೀದಿ ಪ್ರಕ್ರಿಯೆ ನಡೆಯಿತು. ಒಟ್ಟು ರೂ. 290 ಕೋಟಿ ಮೌಲ್ಯದ ಪರಿಕರ ಖರೀದಿಸಲಾಯಿತು. ಆ ವೇಳೆ ಉತ್ಪಾದನೆ ಕಡಿಮೆ ಇದ್ದು, ಬೆಲೆ ಜಾಸ್ತಿ ಇತ್ತು. ಪಿಪಿಇ ಕಿಟ್, ಎನ್-95 ಮಾಸ್ಕ್ ಹಾಗೂ ಸ್ಯಾನಿಟೈಸರ್ ಕೊರತೆ ಇತ್ತು. ದರವೂ ದುಬಾರಿ ಇತ್ತು" ಎಂದು ಹೇಳಿದರು.

ಮಾರ್ಚ್‌ನಲ್ಲಿ ಆರೋಗ್ಯ ಇಲಾಖೆಗೆ ಉತ್ತಮ ಗುಣಮಟ್ಟದ 28 ವೆಂಟಿಲೇಟರ್‌ಗಳನ್ನು ಒಟ್ಟು ರೂ.3.33 ಕೋಟಿ ಬೆಲೆಗೆ ಖರೀದಿಸಲಾಗಿದೆ. ಗುಣಮಟ್ಟ ಉತ್ತಮವಾಗಿದ್ದ ಕಾರಣ ಹೆಚ್ಚು ಬೆಲೆ ಕೊಟ್ಟಿದ್ದೇವೆ. ಬಳಿಕ ವೆಂಟಿಲೇಟರ್‌ಗಳನ್ನು ತಲಾ ರೂ.5.6 ಲಕ್ಷಗೆ ಖರೀದಿಸಿದ್ದೇವೆ. ಕೇಂದ್ರ ಸರ್ಕಾರ 600 ವೆಂಟಿಲೇಟರ್‌ಗಳನ್ನು ಪೂರೈಸಿದೆ ಎಂದರು. ಸಾಮಾನ್ಯ ತಿಳಿವಳಿಕೆ ಇಲ್ಲವೇ. ಬೇಡಿಕೆ ಹೆಚ್ಚಿ ಪೂರೈಕೆದಾರರು ಕಡಿಮೆ ಇದ್ದಾಗ ಬೆಲೆ ಹೆಚ್ಚಿರುತ್ತದೆ. ಉತ್ಪಾದನೆ ಹೆಚ್ಚಿದಾಗ ಬೆಲೆ ಕಡಿಮೆಯಾಗುತ್ತದೆ. ಇದು ಪ್ರತಿಪಕ್ಷ ನಾಯಕರಿಗೆ ಗೊತ್ತಿಲ್ಲವೇ ರಾಜಕಾರಣವೇ ಬೇಡ ಎಂದವರು ಈಗ ಸಲ್ಲದ ರಾಜಕಾರಣ ಮಾಡುತ್ತಿದ್ದಾರೆ. ಕುಣಿಯಲು ಬರದವ ನೆಲ ಡೊಂಕು ಅನ್ನುವ ರೀತಿ ಸಿದ್ದರಾಮಯ್ಯ ವರ್ತಿಸುತ್ತಿದ್ದಾರೆ ಎಂದು ಆರೋಗ್ಯ ಸಚಿವ ಬಿ.ಶ್ರೀರಾಮುಲು ಹೇಳಿದರು.

"ಪಿಪಿಇ ಕಿಟ್‌ಗೆ ಖರ್ಚು ಮಾಡಿರುವುದೇ ರೂ.79,35,16,816ಗಳು ಸಿದ್ದರಾಮಯ್ಯ ಅವರು 150 ಕೋಟಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿದ್ದಾರೆ. ಐಸಿಯುಗಳಲ್ಲಿ ಬಳಕೆಯಾಗುವ ವೆಂಟಿಲೇಟರ್‌ಗೆ ತಲಾ ರೂ. 18 ಲಕ್ಷ ವೆಚ್ಚ ತಗುಲಿದೆ. ವೆಂಟಿಲೇಟರ್ ಖರೀದಿಯಲ್ಲೇ 120 ಕೋಟಿ ರೂಪಾಯಿ ಅವ್ಯವಹಾರ ಆಗಿದೆ ಎಂದಿರುವ ಅವರ ಆರೋಪದಲ್ಲಿ ಹುರುಳಿಲ್ಲ." ಎಂದು ಸಮರ್ಥಿಸಿಕೊಂಡರು.

"ಎನ್-95 ಮಾಸ್ಕ್ ಖರೀದಿಗೆ ರೂ.11,51,58,226 ಖರ್ಚಾಗಿದೆ. ತಲಾ ರೂ.9.50 ಪೈಸೆ ಲೆಕ್ಕದಲ್ಲಿ ರೂ.3 ಲಕ್ಷ ಸರ್ಜಿಕಲ್ ಗ್ಲೌಸ್ ಆರ್ಡರ್ ಕೊಟ್ಟಿದ್ದೇವೆ. ಕೇಂದ್ರ ಸರ್ಕಾರದ ಆದೇಶದಂತೆ ಸ್ಯಾನಿಟೈಸರ್ ಖರೀದಿಯಾಗಿದೆ. 500 ಎಂ.ಎಲ್.ಬಾಟಲಿಯಂತೆ ಒಟ್ಟು 62.50 ಲಕ್ಷ ಮೌಲ್ಯದ ಸ್ಯಾನಿಟೈಸರ್ ಖರೀದಿಯಾಗಿದೆ.

ಇಲಾಖೆಯಲ್ಲಿ 290.60 ಕೋಟಿ ಮೊತ್ತದ ಪರಿಕರಗಳನ್ನು ಖರೀದಿಸಲಾಗಿದೆ" ಎಂದು ಶ್ರೀರಾಮುಲು ಲೆಕ್ಕ ನೀಡಿದರು.

ಆಧಾರ:ವಿಜಯಕರ್ನಾಟಕ, ದಿನಾಂಕ:21.07.2020